ಒತ್ತುವರಿ ಮಾಡಿ ಅವೆಲ್ಲ ಹೂಳು ತುಂಬಿ, ಆಮೇಲೆ ಅವರೆ ನೀರಿಲ್ಲ ಅಂತ ಸರಕಾರಾನೂ ಬೈತಾರೆ. ಅದಕ್ಕೆ ಕೆರೆಗಳನ್ನ ಸರಿಪಡಿಸಿ ಅಭಿವೃದ್ಧಿ ಮಾಡಬೇಕು ಅನ್ನೋದು ಸರಕಾರದ ಪಕ್ಕಾ ನಿರ್ಧಾರ... ಅಂತೆಲ್ಲ ಸುಮಾರು ಮಾತಾಡಿ, ಎರಡು ಮೂರು ಕೆರೆಗಳನ್ನ ತಾವು ದತ್ತು ತಗೊಂಡಿದ್ದಾಗಿ ಹೇಳಿದ. ಅದರಲ್ಲಿ ಕ್ಯಾದ್ಗೆ ಹಿಂಡಿನ ಕೆರೆನೂ ಒಂದಾಗಿತ್ತು. ಕೆರೆಮುಖದಲ್ಲಿ ಒತ್ತುವರಿಯಾಗಿದೆ ಅಂದಾಗ ದೊಡ್ಡೀರ್ಯ ಗಾಬರಿಯಾದ. 'ಅದು ಕೆರೆ ಮೇಲಿನ ಕಾಡು; ಎಷ್ಟು ವರ್ಷದಿಂದ ಮಾಡಾಕ್ಹತ್ತೀನಿ... ಮೊದ್ಲೂ ಅಲ್ಲಿ ಕುರುಚಲಿತ್ತು, ಹುಲ್ಲಿತ್ತು, ಈಗ ಭತ್ತ. ಯತ್ಯಾಸ ಏನು?' ಅಂತ ತಕರಾರು ತೆಗೆದ. 'ಅದು ಕೆರೆ ಮುಖ. ಕೆರೆಗೆ ಜಲಪೂರಣ ಆಗ ಜಾಗ...' ಅಂತ ನಕಾಶೆ ತೋರಿಸಿ, ಕೆರೆ ಒತ್ತುವರಿಯಾದ್ರೆ ಯಾರಿಂದಲೂ ಸಕ್ರಮ ಮಾಡೋಕೆ ಸಾಧ್ಯವಿಲ್ಲ ಅಂತ ಹೇಳಿದಾಗ ನೆಲಕ್ಕಿಳಿದುಹೋದ. ಸುಕುಮಾರನ್ನ ಹುಡುಕಿಕೊಂಡು ಶಿರಸಿಗೆ ಹೋದರೆ ಅವನು ಬೆಂಗಳೂರಿಗೆ ಹೋಗಿದ್ದಾನೆ, ಒಂದು ವಾರವಾಗುತ್ತದೆ ಬರಲು ಅಂತ ತಿಳಿಯಿತು.

ರಾತ್ರಿ ಸ್ವಲ್ಪ ಜಾಸ್ತಿಯೇ ಕುಡಿದಿದ್ದ. '...ನೀನು ಸಣ್ಣಪ್ಪನ ಪೈಕಿ ಗದ್ದಿ ಕೆಲ್ಸಕ್ಕ ಹೋಗದ್ ಬ್ಯಾಡ' ಅಂದ. ಸುಗಣೆ 'ನಾನಿಲ್ಲಿ... ನಿನ್ಮಕಾ ನೋಡಕ್ಯಂತ ದಿನಿಡೀ ಕೂಡ್ಲೇನು?' ಎದುರು ನುಡಿದಳು. ಸಿಟ್ಟು ಕೆರಳಿ 'ನಿಂಗ್ ಮಕ್ಕ್ಳಾಗತಾವ ಇಲ್ಲಾಂತ ಪರೀಕ್ಷೆ ನಡ್ಸಿಯನು?' ಅಂದುಬಿಟ್ಟ. ಜೋರು ಜಗಳವಾಗಿಹೋಯಿತು.

ಮರುದಿನ ಸಂಜೆ ಸುಗ್ಗಿ ತಿಪ್ಪವ್ವನಿಗೆ ನೋಟ ನೋಡುವ ತಯಾರಿಯಲ್ಲಿ ಕೂತವನೆದುರು ಇದ್ದಕ್ಕಿದ್ದಂತೆ ಬಂದ ಸುಗಣೆ, 'ರಾತ್ರಿನ್ಯಾಗ ಇಲ್ಲದ್ದೆಲ್ಲ ಹೇಳಿದ್ಯಲ್ಲ. ನಂಗ ಮಕ್ಕ್ಳಾಗತಾವ ಇಲ್ಲ ಅಂತ ನೋಟ ನೋಡು, ಸಕ್ತಿ ಇದ್ರ...' ಅಂತ ಸವಾಲು ಹಾಕಿಬಿಟ್ಟಳು. ನೆರೆದ ಜನರೆದುರು ಅಸಹಾಯಕನಾದವನಿಗೆ ಬೇರೆ ದಾರಿ ಕಾಣಲಿಲ್ಲ. ಮಂತ್ರ ಸುರುಮಾಡಿದ. ಶರೀರ ಕಂಪಿಸತೊಡಗಿ ಹೂಂಕಾರ ಸುರುವಾಯಿತು. ಒಳಮನಸಲ್ಲಿ ತುಮುಲ ಸನ್ನಿವೇಶವನ್ನು ಮೀರಿಸುತ್ತಿತ್ತು. ಇಕೀಗ್ ಮಕ್ಳಾಗಂಗಿಲ್ಲ ಅಂದ್ರ ರಾಜಾರೋಸಾಗಿ ಹಾದ್ರಕ್ ಟಿಕಿಟ್ಟು ಕೊಟ್ಟಾಂಗಾದ್ರ? ಅಂತ ಒಂದು ಪ್ರಶ್ನೆಯಾದರೆ ಮಕ್ಳಾಗ್ತಾವ ಅಂದ್ರೂ ಬ್ಯಾರೆಯೋರಿಂದಾದ್ರ ತಂದೇ ಅಂತ ಒಪ್ಪಿಕ್ಯಳಾ ಪ್ರಸಂಗ ಬರತ್ತೈತಿ... ಅನ್ನುವ ಇಕ್ಕಟ್ಟಿನ ಸಂದರ್ಭ ಹೊಳೆದು ಸಿಟ್ಟು ಏರತೊಡಗಿತು. ನಡುಗುತ್ತಲೇ, 'ಏ.. ಸುಗಣೀ...' ಅಂತ ಆಕ್ಷೇಪಿಸತೊಡಗಿ ಕ್ರಮೇಣ ಅವಳನ್ನು ಬಾಯಿಗೆ ಬಂದಂತೆಲ್ಲ ಆಕ್ರೋಶದಲ್ಲಿ ಬಯ್ಯತೊಡಗಿತು ದೈವ. ಕೂತವರು ಇದನ್ನು ಅವನ ಮೈಮೇಲೆ ಬಂದ ದೈವ ಮಾಡುತ್ತಿದೆಯೋ; ದೊಡ್ಡೀರ್ಯನೋ ಅನ್ನುವ ಗೊಂದಲಕ್ಕೆ ಬಿದ್ದರು. ಸಣ್ಣಪ್ಪ ಗದ್ದೆಯ ಕೆಲಸಕ್ಕೆ ಹೇಳಲು ಆಕಡೆ ಅದೇ ಸಮಯಕ್ಕೆ ಬಂದ. ಚಿಮ್ಮಿ ಮೇಲೆದ್ದ ದೈವ ಮರದಡಿಗೆ ಬಿದ್ದ ಒಣ ಕೊಂಬೆಯನ್ನೆತ್ತಿಕೊಂಡು ಹೂಂಕರಿಸುತ್ತ ಸಣ್ಣಪ್ಪನತ್ತ ನುಗ್ಗಿತು.

## ಬನವಾಸಿ ವೆಂಕಟೇಶ ದೀಕ್ಷಿತ್

ಕಲಬುರ್ಗಿಯಲ್ಲಿ ಅಂಚೆ ಇಲಾಖೆಯಲ್ಲಿ ವೃತ್ತಿ ಜೀವನ ಆರಂಭಿಸಿದ ವೆಂಕಟೇಶ ದೀಕ್ಷಿತ್ ಭಾರತೀಯ ಸೇನೆಯಲ್ಲಿ ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ನಂತರ ದೂರಸಂಪರ್ಕ ಇಲಾಖೆಯಲ್ಲಿ ಉಪಮಹಾಪ್ರಬಂಧಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಪ್ರಕಟಿತ ಕಥಾಸಂಕಲನ 'ಕಾವಡಿ'. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.